

ಜೀವನಶೈಲಿಯ ಕಾರಣದಿಂದ ಈಗೀಗ ಮಹಿಳೆಯರಲ್ಲಿ ಪಿಸಿಒಡಿ ಸಮಸ್ಯೆ ಹೆಚ್ಚುತ್ತಿದೆ. ಜೊತೆಗೆ ಆನುವಂಶೀಯತೆ ಕಾರಣದಿಂದಲೂ ಅವಳಿ, ತ್ರಿವಳಿ, ಬಹು ಶಿಶುಗಳ ಗರ್ಭಧಾರಣೆಯಾಗುವ ಸಂಭವ ಇರುತ್ತದೆ. ಇದಕ್ಕೆ ಕಾರಣಗಳೇನು? ನಿರ್ವಹಣೆ ಹೇಗೆ? ಮುಂಜಾಗ್ರತಾ ಕ್ರಮಗಳೇನು?

# ಅವಳಿ, ತ್ರಿವಳಿ ಗರ್ಭ! ಸಹಜ ಹೆರಿಗೆ ಆಗಬಹುದೆ?

■ ಡಾ. ವೀಣಾ ಭಟ್, ಭದ್ರಾವತಿ

ಅವಳಿ, ತ್ರಿವಳಿ ಗರ್ಭಧಾರಣೆ ಸೃಷ್ಟಿಯ ಸೋಜಿಗ ಎನಿಸಿದರೂ ಇತ್ತೀಚೆಗೆ ಅವುಗಳ ಸಂಭವ ಸ್ವಲ್ಪ ಹೆಚ್ಚೇ ಎನ್ನಬಹುದು. ಹಿಂದಿನ ಕಾಲದಲ್ಲಿ ಎಷ್ಟೋ ಬಾರಿ ಹೆರಿಗೆಯಲ್ಲೇ ಒಂದು ಮಗು ಆಗಿ ಇನ್ನೊಂದು ಮಗು ಇದೆ ಎಂದು ಪತ್ತೆಯಾಗುತ್ತಿತ್ತು. ಆದರೆ ಈಗ ಅಲ್ಟ್ರಾಸೌಂಡ್ ಪರೀಕ್ಷೆಯಿಂದ ಗರ್ಭಧಾರಣೆಯಾಗಿ ಎರಡು ತಿಂಗಳೊಳಗೆ ಅವಳಿ/ತ್ರಿವಳಿ ಗರ್ಭಗಳ ಬಗ್ಗೆ ತಿಳಿಯಬಹುದು.

ಕೆಲವೊಮ್ಮೆ ಒಂದು ಮಗು ಹೆಣ್ಣು ಅಥವಾ ಗಂಡಿದ್ದು ಎರಡನೇ ಬಾರಿ ಅವಳಿ ಗರ್ಭಧಾರಣೆ ಆದಾಗ ಎರಡು ಹೆಣ್ಣಾಗುತ್ತದೆಯೋ, ಎರಡು ಗಂಡಾಗುತ್ತದೆಯೋ ಎಂಬ ಆತಂಕ ಕಾಡುತ್ತದೆ. ಒಂದೇ ಪ್ರಸವದಲ್ಲಿ ಕೇವಲ ಅವಳಿಗಳು ಮಾತ್ರವಲ್ಲ ತ್ರಿವಳಿ, ನಾಲ್ಕು ಮಕ್ಕಳು, 5 ಮಕ್ಕಳು ಹಾಗೂ ಕೆಲವೊಮ್ಮೆ 8 ಮಕ್ಕಳನ್ನು ಒಟ್ಟಿಗೆ ಹಡೆದ ಉದಾಹರಣೆಗಳು ಇವೆ. ವಿಶ್ವದಾದ್ಯಂತ 250ರಲ್ಲಿ ಒಬ್ಬರಿಗೆ ಈ ಅವಳಿ ಅಥವಾ ಬಹುಮಕ್ಕಳ ಜನನವಾಗಬಹುದು. ಭಾರತದಲ್ಲಿ ಹೆಲೆನ್ ಎಂಬ ವಿಜ್ಞಾನಿಯ ಸೂತ್ರದ ಪ್ರಕಾರ ಅವಳಿಗಳು 89ರಲ್ಲಿ ಒಂದು, ತ್ರಿವಳಿಗಳು 802ರಲ್ಲಿ ಒಬ್ಬರಿಗೆ ಆಗಬಹುದು.

ಅವಳಿ ಮಕ್ಕಳಲ್ಲಿ ಎರಡು ವಿಧ ತದ್ರೂಪಿ/ಸಮಹೋಲಿಕೆ ಅವಳಿಗಳು (ಯೂನಿ ಓವ್ಯೂಲರ್) ಮತ್ತು ಭ್ರಾತೃ ಅವಳಿಗಳು (ಬೈನೊ ಓವ್ಯೂಲರ್) ತದ್ರೂಪಿ ಅವಳಿಯಲ್ಲಿ ಒಂದೇ ಅಂಡಾಣು ಹಾಗೂ ವೀರ್ಯಾಣು ಫಲಿತವಾಗಿ ಭ್ರೂಣ ಕೆಲವು ಸಲ ವಿಭಜನೆಯಾಗಿ ಅವಳಿ ಅಥವಾ ಹೆಚ್ಚು ಗರ್ಭಧಾರಣೆಯಾಗುವುದು. ಇವು ಒಂದೇ ತರಹ ಲಿಂಗ, ರೂಪ, ರಕ್ತದ ಗುಂಪು, ಗುಣ ವ್ಯಕ್ತಿತ್ವ ಉಳ್ಳವರಾಗಿರುತ್ತಾರೆ. ಒಂದೇ ತಾಯಿಯ ಮಾಸು ಹೊಂದಿದ್ದು, ಒಂದೇ ಜರಾಯು ಚೀಲ ಹೊಂದಿರುತ್ತದೆ.

ಭ್ರಾತೃ ಅವಳಿಗಳಲ್ಲಿ ಎರಡು ಪ್ರತ್ಯೇಕ ಅಂಡಾಣುಗಳು ಪ್ರತ್ಯೇಕ ವೀರ್ಯಾಣುಗಳೊಡನೆ ಫಲಿತವಾಗಿ ಆಗುವುದು. ಮಕ್ಕಳು ಒಂದೇ ಲಿಂಗ ಅಥವಾ ಬೇರೆ ಲಿಂಗದವರು, ಬೇರೆ ಬೇರೆ ರಕ್ತ ಗುಂಪು, ಸ್ವಭಾವ, ಅಭಿರುಚಿ, ಮಾಸು (ಪ್ಲಾಸೆಂಟಾ) ಕೂಡ ಬೇರೆ ಇರಬಹುದು. ಒಂದೇ